ದಿನಾಂಕಃ 23-06-2017 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಎಂ ಬಿ ಸಿ ವಕೀಲರಿಂದಃ

ನಾನು ವಾದಿಗೆ ಚಿಕ್ಕಪ್ಪನಾಗಬೇಕು. ನಾನು ತರೀಕಲ್ ನಲ್ಲಿ ಮನೆ ನಂಃ 63 ರಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ಸಾಕ್ಷಿಗೆ ನಿಮ್ಮ ವಾಸ ಮೈಸೂರು ಎಂದರೆ ಸಾಕ್ಷಿಯು ನಮ್ಮ ಮಕ್ಕಳ ಮನೆ ಇದ್ದು, ನಾನು ಹೋಗಿ ಬರುತ್ತೇನೆ ಎಂದಿದ್ದಾರೆ. ತರೀಕಲ್‌ನಲ್ಲಿ ನನಗೆ ಜಮೀನು ಇದ್ದು, ಅದರ ಸರ್ವೆ ನಂಃ 23/2. ಸದರಿ ಸರ್ವೆ ನಂಃ 23/2 ರಲ್ಲಿ ನನ್ನ ಹೆಸರಿನಲ್ಲಿ ನಮೂದು ಇದೆ. ನನ್ನ ಜಮೀನು ಅಂದರೆ ಸರ್ವೆ ನಂಃ 23/2 ರ ಒಟ್ಟು ವಿಸ್ತೀರ್ಣ 3 ಎಕರೆ 16 ಗುಂಟೆ ಇದೆ. ಅದರ ಚಕ್ಕುಬಂಧಿ ಪೂರ್ವಕ್ಕೆ ದೇವಸ್ಥಾನ ಮತ್ತು ಜಮೀನು ಇದೆ, ಪಶ್ಚಿಮಕ್ಕೆ ಶಿವಣ್ಣ ಇವರಿಗೆ ನಾನೇ ಮಾರಿರುವಂತಹ ಜಮೀನು, ದಕ್ಷಿಣಕ್ಕೆ ಕೆಂಗಶೆಟ್ಟಿ ಮತ್ತು ಅವರ ಮಕ್ಕಳ ಜಮೀನು ಮತ್ತು ಉತ್ತರಕ್ಕೆ ಶೆಲ್ಕಣ್ಣ ಇವರ ತಂಗಿಗೆ ನಾನು ಮಾರಿದಂತಹ 30 ಗುಂಟೆ ಜಮೀನು ಇದೆ. ಸದರಿ ಸರ್ವೆ ನಂಃ 23/2 ರಲ್ಲಿ ಶಿವಣ್ಣನಿಗೆ 1 ಎಕರೆ ಜಮೀನನ್ನು ಸುಮಾರು 15 ವರ್ಷಗಳ ಹಿಂದೆಯೇ ಮಾರಾಟ ಮಾಡಿದ್ದೇನೆ.

ವಾದಿಗೆ 7-8 ವರ್ಷಗಳ ಹಿಂದೆ ಹುಷಾರಿರಲಿಲ್ಲ, ವಾದಿಗೆ ಹರ್ನಿಯಾ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿತ್ತು, ವಾದಿಗೆ ಮೊದಲು ಹರ್ನಿಯಾ ಶಸ್ತ್ರ ಚಿಕಿತ್ಸೆಯಾಯಿತು, ನಂತರದಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿದೆ. ವಾದಿಗೆ ಹರ್ನಿಯಾ ಶಸ್ತ್ರ ಚಿಕಿತ್ಸೆಯಾದ 6 ತಿಂಗಳ ನಂತರ ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ವಾದಿ ಹರ್ನಿಯಾ ಶಸ್ತ್ರ ಚಿಕಿತ್ಸೆಯಾಗಿ ಒಂದು ವಾರದೊಳಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದರು ಎಂದರೆ ಸರಿ. ವಾದಿ ಕಣ್ಣಿನ ಶಸ್ತ್ರ ಚಿಕಿತ್ಸೆಯಾದ 2 ದಿನಗಳ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತಾರೆ. ಹರ್ನಿಯಾ ಶಸ್ತ್ರ ಚಿಕಿತ್ಸೆ ಯಾದ 6 ತಿಂಗಳ ನಂತರ ವಾದಿ ದೈನಂದಿನ ಚಟುವಟಿಕೆಗಳನ್ನು ಪ್ರಾರಂಭ ಮಾಡಿದರು. ಹಾಗೆ ಕಣ್ಣಿನ ಶಸ್ತ್ರ ಚಿಕಿತ್ಸೆಯಾದ 2 ತಿಂಗಳ ನಂತರ ವಾದಿ ದೈನಂದಿನ ಚಟುವಟಿಕೆಗಳನ್ನು ಪ್ರಾರಂಭ ಮಾಡಿದರು. 1ನೇ ಪ್ರತಿವಾದಿಗೆ ವಾದಿಯು ದಾವಾಸ್ವತ್ತನ್ನು

ಕೊಟ್ಟಿದ್ದರಾ ಎಂದರೆ ಸಾಕ್ಷಿಯು ವಾದಿಯು ದಾವಾಸ್ವತ್ತನ್ನು ಕೊಟ್ಟಿರುವುದಿಲ್ಲ, 1ನೇ ಪ್ರತಿವಾದಿ ಅಕ್ರಮವಾಗಿ ಸ್ವಾಧೀನತೆಯನ್ನು ತೆಗೆದುಕೊಂಡಿರುತ್ತಾರೆ ಎಂದಿದ್ದಾರೆ. 1ನೇ ಪ್ರತಿವಾದಿ ಸುಮಾರು 13 ರಿಂದ 14 ಗುಂಟೆ ಜಮೀನನ್ನು ಅಕ್ರಮವಾಗಿ ಸ್ವಾಧೀನವನ್ನು ಹೊಂದಿರುತ್ತಾರೆ.

1ನೇ ಪ್ರತಿವಾದಿ ಅಕ್ರಮವಾಗಿ ಸ್ವಾಧೀನ ಹೊಂದಿರುವ ಜಮೀನು ದಾವಾಸ್ವತ್ತಿನ ಪಶ್ಚಿಮಕ್ಕೆ ಹಾಗೂ ದಕ್ಷಿಣದ ಕಡೆಗೆ ಬರುತ್ತದೆ. 1ನೇ ಪ್ರತಿವಾದಿ ಅಕ್ರಮವಾಗಿ ಸ್ವಾಧೀನ ಹೊಂದಿರುವ ದಾವಾಸ್ವತ್ತಿನ ಆಜುಬಾಜಿನಲ್ಲಿ ನಮಗೆ ಯಾವುದೇ ರೀತಿಯಾದಂತಹ ಜಮೀನು ಇರುವುದಿಲ್ಲ, ದಾವಾಸ್ವತ್ತನ್ನು ಹಾಯ್ದುಕೊಂಡು ನಮ್ಮ ಜಮೀನಿಗೆ ಹೋಗುತ್ತಿದ್ದೆವು. ಪ್ರತಿವಾದಿಗಳು ಯಾವ ದಿನಾಂಕ, ವರ್ಷ ಮತ್ತು ತಿಂಗಳಿನಲ್ಲಿ ಒತ್ತುವರಿ ಮಾಡಿಕೊಂಡರು ಎಂದು ನಿಖರವಾಗಿ ಹೇಳಲು ನನಗೆ ಆಗುವುದಿಲ್ಲ. ಇದೇ ವರ್ಷದಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವ ಬಗ್ಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಗಳ ಜಮೀನಿನಲ್ಲಿ ತೆಂಗಿನ ಮರ ಮತ್ತು ಇತರೆ ಜಾತಿಯ ಮರಗಳು ಇವೆ ಎಂದರೆ ಸಾಕ್ಷಿಯು ಇವೆ ಎಂದು, ಮುಂದುವರೆದು ವಾದಿಯ ಜಮೀನಿನಲ್ಲೂ ಸಹಾ ಇವೆ ಎಂದಿದ್ದಾರೆ.

ಸರ್ವೆ ನಂಃ 42 ಪ್ರತಿವಾದಿಗಳಿಗೆ ಸೇರಿದಂತಹ ಜಮೀನು ಆಗಿರುತ್ತದೆ. ಸರ್ವೆ ನಂಃ 43 ರಲ್ಲಿ 2 ಎಕರೆ ಜಮೀನು ವಾದಿಗೆ ಸೇರಿರುತ್ತದೆ. ಸರ್ವೆ ನಂಃ 43 ರಲ್ಲಿ ಒತ್ತುವರಿಯಾದಂತಹ ಜಮೀನನ್ನು ಹೊರತುಪಡಿಸಿ 1ನೇ ಪ್ರತಿವಾದಿ ಮತ್ತು ಅವರ ಹೆಂಡತಿಗೆ ಯಾವುದೇ ಜಮೀನು ಇರುವುದಿಲ್ಲ. ಸರ್ವೆ ನಂಃ 43 ರಲ್ಲಿ ಸುಮಾರು 500-600 ಎಕರೆ ಜಮೀನು ಇದೆ. ಸರ್ವೆ ನಂಃ43 ರಲ್ಲಿ ಒಟ್ಟು ಎಷ್ಟು ಜನಕ್ಕೆ ಸಾಗುವಳಿ ಕೊಟ್ಟಿದ್ದಾರೆಂದು ಹೇಳಲು ನನಗೆ ಆಗುವುದಿಲ್ಲ ಮತ್ತು ವಾದಿಯರನ್ನು ಹೊರತುಪಡಿಸಿ ಬೇರೆಯವರಿಗೆ ಸಾಗುವಳಿ ಮತ್ತು ಅವರು ಸ್ವಾಧೀನತೆ ಹೇಳಲು ಆಗುವುದಿಲ್ಲ. ನಾನು ಮತದಾನವನ್ನು ಮೈಸೂರಿನಲ್ಲಿ ಚಲಾಯಿಸುತ್ತೇನೆ. ನನಗೆ ತರೀಕಲ್‌ನಲ್ಲಿ ಮನೆ ಇಲ್ಲಾ ಮತ್ತು



ನಾನು ವಾಸ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ 23/2 ರ ಜಮೀನನ್ನು ನಾನು ಸುಮಾರು 15-16 ವರ್ಷಗಳ ಹಿಂದೆಯೇ ಮಾರಿಬಿಟ್ಟು, ಊರನ್ನು ಬಿಟ್ಟು ಮೈಸೂರಿನಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1ನೇ ಪ್ರತಿವಾದಿಯ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತ ಇಲ್ಲ ಎಂದರೆ ಸರಿಯಲ್ಲ.

ವಾದಿಗೆ ಹರ್ನಿಯಾ ಶಸ್ತ್ರಚಿಕಿತ್ಸೆ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿರುವ ಬಗ್ಗೆ ನನ್ನ ವಕೀಲರಿಗೆ ಹೇಳಿ ಪ್ರಮಾಣಪತ್ರದಲ್ಲಿ ಬರೆಸಿಹಾಕಿದ್ದೇನೆ. ನಾನು ವಾದಿಯ ಚಿಕ್ಕಪ್ಪನಾಗಿದ್ದು, ವಾದಿಗೆ ಸಹಾಯ ಮಾಡಲೆಂದು ವಾದಿಗೆ ಹರ್ನಿಯಾ ಶಸ್ತ್ರಚಿಕಿತ್ಸೆ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ 1ನೇ ಪ್ರತಿವಾದಿ ದಾವಾಸ್ವತ್ತಿನಲ್ಲಿ ಒತ್ತುವರಿ ಮಾಡಿರುವ ಬಗ್ಗೆ ಗೊತ್ತಿಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ದಾವಾಸ್ವತ್ತಿನ ಮೇಲೆ ಹಾಯ್ದು ಹೋಗಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಅವರ ಜಮೀನಿನಲ್ಲಿ ಫಸಲು ಬರುತಕ್ಕಂತಹ ತೆಂಗಿನ ಮರಗಳು, ಪಚ್ಚುಬಾಳೆ ಮತ್ತು ಇತರೆ ಜಾತಿಯ ಮರಗಳು ಇವೆ ಎಂದರೆ ಸರಿ. ಅವುಗಳನ್ನು ಹೊಡೆದುಕೊಳ್ಳುವ ಉದ್ದೇಶದಿಂದ ವಾದಿಗೆ ಸಹಾಯ ಮಾಡಲೆಂದು ಸಾಕ್ಷಿ ನುಡಿಯಲು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 2ನೇ ಪ್ರತಿವಾದಿ ಪರಃ ಶ್ರೀ ಸಿಎಸ್ಎಸ್ ವಕೀಲರಿಂದಃ

ಕಾಲಾವಕಾಶಕೋರಿದ್ದರಿಂದ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.